ಕಿತ್ತುಕೊಂಡು ಹೋಗಿದ್ದಾರಲ್ಲ ಸರ್' ಎಂದು ಚಂದ್ರು ಹಲುಬತೊಡಗಿದ.

ಅಲ್ಲಿನ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸಿದೆವು. ಶ್ರೀಕಾಂತ್, 'ಇದು ಯಾವುದೋ ಪ್ರಾಣಿ, ಪಕ್ಷಿಯ ದಾಳಿಯಲ್ಲ ಸರ್. ಮನುಷ್ಯರೇ ಮಾಡಿರುವ ಕಿತಾಪತಿ. ಚಂದ್ರು ಹೇಳಿದ ಹಾಗೆ ನಿನ್ನೆ ಇವನು ಬೆದರಿಸಿ ಕಳಿಸಿದ ಹುಡುಗರೇ ಬಂದು ಇದನ್ನು ಕಿತ್ತುಕೊಂಡು ಹೋಗಿರಬೇಕು. ಅವರಿಗೆ ಇದರ ಮಹತ್ವ ಗೊತ್ತಿರಲು ಸಾಧ್ಯವೇ ಇಲ್ಲ. ಹುಡುಗಾಟದಲ್ಲಿ ಮರಿಗಳನ್ನು ತಾವೇ ಸಾಕಬಹುದೆಂದು ಗೂಡಿನ ಸಮೇತ ಎತ್ತಿಕೊಂಡು ಹೋಗಿದ್ದಾರೆ' ಎಂದು ತಮ್ಮ ಅಭಿಪ್ರಾಯ ಹೇಳಿದರು. ಆಗ ನಾನು, 'ಈ ಪಕ್ಷಿಯ ಮರಿಗಳನ್ನು ತೊಗೊಂಡು ಹೋದವರು ಒಂದು ಗಂಟೆನೂ ಅವುಗಳನ್ನ ಉಳಿಸಿ ಕಾಪಾಡೋಕೆ ಆಗೋದಿಲ್ಲ. ಮನುಷ್ಯ ಮಾತ್ರದವನಿಗೆ ಇದೆಂದೂ ಸಾಧ್ಯವಾಗದ ಕೆಲಸ. ಚಿಕ್ಕ ಹುಡುಗರಾಗಿದ್ರೆ ಅವುಕ್ಕೆ ಈ ಸೂಕ್ಷ್ಮ ಗೊತ್ತಿರಲ್ಲ. ಕುತೂಹಲ ಮತ್ತು ಪ್ರೀತಿಯಿಂದನೂ ಈ ಕೆಲಸಾನ ಅರಿವಿಲ್ಲದ ಹುಡುಗರು ಮಾಡಿ ಬಿಡುತ್ತಾರೆ. ಮರಿಗಳಿಗೆ ಪಥ್ಯವೇ ಆಗದ ಬಾಳೆಹಣ್ಣು, ಹಾಲು, ಕಾಳು, ಅನ್ನ ಉಣಿಸಲು ಟ್ರೈ ಮಾಡಿದ್ದರೆ ಮರಿಗಳು ಸತ್ತೇ ಹೋಗಿರುತ್ತವೆ' ಎಂದು ಹೇಳಿ ಮೌನವಾದೆ.

ಚಂದ್ರು ಕಣ್ಣೀರು ಹಾಕುವ ಮುಖ ಮಾಡಿಕೊಂಡು ನಿಂತಿದ್ದ. ಬಾಲದಂಡೆ ದಂಪತಿಗಳು ತಮ್ಮ ಮರಿಗಳ ದನಿಗಾಗಿ ಹಂಬಲಿಸಿ ಅತ್ತಿತ್ತ ಓಡಾಡುತ್ತಿದ್ದವು. ತಕ್ಷಣ ನಾನು ಹಿಂದಿನ ದಿನ ಬಂದು ಹೋದ ಡಾಕ್ಟರ್ ರಾಘವೇಂದ್ರ ಅವರಿಗೆ ಫೋನ್ ಮಾಡಿದೆ. 'ಸಾರ್ ನೋಡಿ ನಮ್ಮ ಅದೃಷ್ಟವೇ ಸರಿ ಇಲ್ಲ. ಎರಡು ಸಲ ಬಂದರೂ ಈ ಪಕ್ಷಿಯನ್ನು ನೋಡಕ್ಕೆ ಆಗಲೇ ಇಲ್ಲ' ಎಂದು ಆಗಿರುವ ಅನಾಹುತ ತಿಳಿಸಿದೆ. ಅವರಿಗೂ ತುಂಬಾ ಬೇಜಾರಾಯ್ತು ಹೀಗೆ ಅದೂ ಇದು ಮಾತು ಮುಂದುವರೆಯುತ್ತಾ ಅವರೊಂದು ಸ್ವಾರಸ್ಯಕರ ವಿಷಯ ಹೇಳಿದರು.

'ನಿನ್ನೆ ದಿನ ನಾವಲ್ಲಿ ಫೋಟೋ ತೆಗೆಯುವಾಗ ನಾನೊಂದು ಅಚ್ಚರಿಯ ಸಂಗತಿ ಗಮನಿಸಿದೆ. ಅಲ್ಲಿದ್ದ ಮರಿಗಳಿಗೆ ಒಂದು ಗಂಡು ಮತ್ತು ಎರಡು ಹೆಣ್ಣು ಪಕ್ಷಿಗಳು ಬಂದು ಆಹಾರ ಉಣ್ಣಿಸುತ್ತಿದ್ದವು. ಇದು ವಿಶೇಷ ಅನ್ನಿಸಿತು. ಸಾಧಾರಣವಾಗಿ



ಹೀಗಾಗುವುದಿಲ್ಲವಲ್ಲ!' ಎಂದರು. 'ಒಂದು ಗಂಡು ಒಂದು ಹೆಣ್ಣು ಕೂಡಿ ಸಂಸಾರ ಮಾಡುವುದನ್ನು ನೋಡಿದ್ದೇವೆ. ಇದ್ಯಾವ ಗಂಡು ಸರ್ ಎರಡೆರಡು ಮದುವೆ ಆಗಿದೆ' ಎಂದು ತಮಾಷೆ ಮಾಡಿದೆ.

ಅದಕ್ಕವರು ಬಹಳ ಸೂಕ್ಷ್ಮವಾಗಿ ಗಮನಿಸಿದ ತಮ್ಮ ನೋಟವನ್ನು ವಿಸ್ತರಿಸಿ ಹೀಗೆ ಹೇಳಿದರು, 'ಇನ್ನೊಂದು ಹಕ್ಕಿಯ ಗೂಡು ಕೆಟ್ಟಿತ್ತು ಅಂತ ಕಾಣುತ್ತೆ. ಅರ್ಧದಲ್ಲೇ ಅದರ ಮರಿಗಳು ಕಾಣೆಯಾಗಿರಬಹುದು. ಆದರೆ ತಾಯಿ ಹಕ್ಕಿಯೊಳಗಿನ ತಾಯಿತನ ಇನ್ನೂ ಮುಗಿದಿರುವುದಿಲ್ಲ. ಹೀಗಾಗಿ ಊಟ ಎಂದು ಗೋಗರೆಯುವ ಪಕ್ಕದ ಗೂಡಿನ ಪಕ್ಷಿಗಳ ಶಬ್ದ ಕೇಳಿ ಇವನ್ನೇ ತನ್ನ ಮರಿಗಳು ಎಂದು ಭಾವಿಸಿ ಅದು ಆಹಾರ ತಂದು ತಿನ್ನಿಸುತ್ತಿತ್ತು ಎಂದು ಕಾಣುತ್ತೆ. ಇದೆಲ್ಲ ಪ್ರಕೃತಿಯಲ್ಲಿ ಸಹಜವಾಗಿ ನಡೆದು ಹೋಗುತ್ತವೆ. ಯಾರದೋ ಮಗುವನ್ನು ಯಾರೋ ಸಾಕುವುದು. ತಮ್ಮದೇ ಮಕ್ಕಳೆಂದು ಭಾವಿಸಿ ಯಾವುದೇ ಭೇದಭಾವ ಮಾಡದೆ ಇರುವುದು ತಾಯಿಗಿರುವ ಶ್ರೇಷ್ಠ ಗುಣ. ಅದನ್ನಿಲ್ಲಿ ಕಂಡೆ' ಬಹಳ ಅಚ್ಚರಿ ಅನಿಸಿತು. ನಮ್ಮ ಕಣ್ಣಿಗೆ ಕಾಣದ ಅದೆಷ್ಟೋ ಸಂಗತಿಗಳು ಇಲ್ಲಿ ತಣ್ಣಗೆ ನಡೆದು ಹೋಗುತ್ತಿವೆಯಲ್ಲ ಎಂದು ನೆನೆದೇ ದಿಗ್ಭ್ರಮೆ ಹುಟ್ಟಿತು.

●